ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 12-09-2023 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ ಎಂ ಎಂ ನ್ಯಾಯವಾದಿರವರಿಂದಃ

ನಾನು ಪಿ ಯು ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ತಾಯಿ ಮನೆ ಕಾರವಾರದ ಬಿಣಗಾ ಗ್ರಾಮದಲ್ಲಿ ಇರುತ್ತದೆ. ನನ್ನ ಮದುವೆಯು 1990 ರಲ್ಲಿ ಆಗಿರುತ್ತದೆ. ನನ್ನ ಪತಿ ಮೀನುಗಾರಿಕಾ ವೃತ್ತಿಯನ್ನು ಮಾಡುತ್ತಿದ್ದರು. ನನ್ನ ಪತಿಗೆ ಎರಡು ಜನ ಅಕ್ಕಂದಿರಿರುತ್ತಾರೆ. ನನ್ನ ಮಾವ ಅಂದರೆ ಗಂಡನ ತಂದೆ ಹೆಸರು ನೀಲಕಂಠ ಬೆರಾ ಹರಿಕಂತ್ರ ಇರುತ್ತದೆ. ಅವರು ಸಹ ಮೀನುಗಾರಿಕಾ ವೃತ್ತಿಯನ್ನು ಮಾಡುತ್ತಿದ್ದರು. ನೀಲಕಂಠ ಇವರಿಗೆ 1 ಗುಂಟೆ 4 ಆಣೆ ಜಮೀನು ಇತ್ತು. ಅದನ್ನು ಹೊರತುಪಡಿಸಿ ಬೇರೇ ಯಾವುದೇ ಜಮೀನು ಅವರಿಗೆ ಇರಲಿಲ್ಲ. ದಾವಾ ಜಮೀನನ್ನು ನೀಲಕಂಠ ಇವರು ಖರೀದಿ ಮಾಡಿರುತ್ತಾರೆ. ನೀಲಕಂಠ ಇವರು ದಾವಾ ಜಮೀನನ್ನು ದಿಃ 05-02-1976 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ದಾವಾಸ್ತಿಯನ್ನು ಖರೀದಿ ಮಾಡುವಾಗ ಅದರಲ್ಲಿ ಕಾರವಾರ ಸಿ ಎಂ ಸಿ ಮನೆ ನಂ.391 ಅಸ್ತಿತ್ವದಲ್ಲಿದ್ದು, ಮನೆಯನು ಸಹ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ಪತ್ರದ ಆಧಾರದಂತೆ ಕಂದಾಯ ದಾಖಲೆಗಳಲ್ಲಿ ನನ್ನ ಮಾವನ ಹೆಸರು ಎಂ ಆರ್ ಸಂಖ್ಯೆ ಎ 1274 ರಂತೆ ದಾಖಲಾಗಿರುತ್ತದೆ ಎಂದರೆ ಸರಿ. ನನ್ನ ಮದುವೆಯ ಪೂರ್ವದಲ್ಲಿಯೇ ನನ್ನ ಗಂಡನ ಸಹೋದರಿಯರ ವಿವಾಹ ಆಗಿತ್ತು. ನನ್ನ ಮದುವೆಯ ಸಮಯದಲ್ಲಿ ಅತ್ತೆ-ಮಾವ ಜೀವಂತ ಇದ್ದರು. ನಾವು ಈಗ ವಾಸ್ತವ್ಯ ಮಾಡಿಕೊಂಡಿರುವ ಮನೆ ಹಾಗೂ ದಾವಾಸ್ತಿ ಎರಡೂ ಬೇರೇ ಬೇರೇ ಇರುತ್ತದೆ. ನಾವು ವಾಸ ಮಾಡುತ್ತಿರು ಮನೆಯ ಸರ್ವೆ ಸಂಖ್ಯೆ 1370/9 ಇರುತ್ತದೆ. ದಾವಾಸ್ತಿ ಜಮೀನಿನ ಸರ್ವೆ ಸಂಖ್ಯೆ 1370/8 ಇರುತ್ತದೆ. ನನಗೆ ಕನ್ನಡ ಓದಲು ಹಾಗೂ ಬರೆಯಲು ಬರುತ್ತದೆ. ನನ್ನ ಮಾವ ಮೃತರಾದ ನಂತರ ದಾವಾಸ್ತಿಯು ನನ್ನ ಗಂಡನ ಹೆಸರಿಗೆ ಬಂದಿರುತ್ತದೆ. ಪ್ರಸ್ತುತ ದಾವಾಸ್ತಿಗಳಿಗೆ ಸಂಬಂದಪಟ್ಟ ಕಂದಾಯ ದಾಖಲೆಗಳು ಪ್ರತಿವಾದಿಯರ ಹೆಸರಿನಲ್ಲಿ ಇರುತ್ತದೆ. ನನ್ನ ಪತಿ ಮೃತರಾಗಿರುತ್ತಾರೆ. ನನ್ನ ಪತಿ ಮೃತವಾದ ನಂತರ ನಾವು ವಾರಸು ಮಾಡಿರುತ್ತೇವೆ. ವಾರಸುನಾತೆಯ ಮೇರೆಗೆ ನಾನು ವಾಸವಿರುವ ಮನೆಯ ಆಸ್ತಿಯನ್ನು ನನ್ನ ಹೆಸರಿಗೆ 2012-2013 ನೇ ಸಾಲಿನಲ್ಲಿ ವಾರಸಾ ಮಾಡಿರುತ್ತೇನೆ. ಹಾಗೇ 2012-2013 ನೇ ಸಾಲಿನಲ್ಲಿ ನನ್ನ ಮನೆಯ ಆಸ್ತಿಯನ್ನು ನನ್ನ ಹೆಸರಿಗೆ ಮಾಡುವ ಕಾಲಕ್ಕೆ ದಾವಾಸ್ತಿಗೆ ಸಂಬಂದಪಟ್ಟಂತೆ ವಾರಸು ಹಕ್ಕಿನಂತೆ ಕಂದಾಯ ದಾಖಲೆಗಳಲ್ಲಿ ನನ್ನ ಹೆಸರು ನಮೂದಿಸಿರುವುದಿಲ್ಲ. 2002 ನೇ ಸಾಲಿನಿಂದ ದಾವಾಸ್ತಿಗೆ ಸಂಬಂದಪಟ್ಟ ಕಂದಾಯ ದಾಖಲೆಗಳಲ್ಲಿ ಗಂಡನ ಹೆಸರು ಕಡಿಮೆ ಆಗಿ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ



ಸಾಕ್ಷಿಯು ಪ್ರತಿವಾದಿಯು ಆ ರೀತಿ ಮಾಡಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಪತಿ 2011 ನೇ ಸಾಲಿನಲ್ಲಿ ಪೋತಿ ಆಗಿರುತ್ತದೆ. ನನ್ನ ಗಂಡನ ಜೀವಿತಾವಧಿಯಲ್ಲಿ ದಾವಾಸ್ತಿಗೆ ಸಂಬಂದಪಟ್ಟ ಕಂದಾಯ

ದಾಖಲೆಗಳಲ್ಲಿ 2002 ರಿಂದ 2011 ರ ವರೆಗೆ ನನ್ನ ಗಂಡನ ಹೆಸರು ಕಡಿಮೆಯಾಗಿ ಪ್ರತಿವಾದಿಯರ ಹೆಸರು ನಮೂದಾಗಿದ್ದು, ಅದನ್ನು ನನ್ನ ಗಂಡ ಅವರ ಜೀವಿತಾವಧಿಯಾಗಲಿ ಅಥವಾ ನಾನಾಗಲಿ, ಇಲ್ಲಿಯವರೆಗೆ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ನಮಗೆ ಯಾವುದೇ ಮಾಹಿತಿ ನೀಡದೇ ಪ್ರತಿವಾದಿಯರು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ವಿಷಯ ಮೊದಲ ಬಾರಿಗೆ ಪ್ರತಿವಾದಿಗಳು ಅಸಲು ದಾವೆ ಸಂಖ್ಯೆ 172/2015 ನ್ನು ದಾಖಲು ಮಾಡಿದ ನಂತರ ನಮಗೆ ನೋಟೀಸ ಬಂದ ಮೇಲೆ ಪ್ರತಿವಾದಿಯರು ತಮ್ಮ ಹೆಸರನ್ನು ದಾವಾಸ್ತಿಗೆ ದಾಖಲಿಸಿಕೊಂಡಿರುವುದು ತಿಳಿದುಬಂದಿರುತ್ತದೆ. ಪ್ರತಿವಾದಿಯರು ಸಲ್ಲಿಸಿದ ಅಸಲು ದಾವೆ ಸಂಖ್ಯೆ 172/2015 ಯು ಪ್ರಸ್ತುತ ದಾವೆಗೆ ಸಂಬಂಧಪಟ್ಟ ದಾವಾಸ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ. ನಾನು ಪ್ರಸ್ತುತ ದಾವೆ ಮಾಡುವ ಪೂರ್ವದಲ್ಲಿ ಪ್ರತಿವಾದಿಗಳಿಗೆ ನಾನು ವಕೀಲರ ಮೂಲಕ ನೋಟೀಸ್ ನೀಡಿರುವುದಿಲ್ಲ. ನನ್ನ ಪತಿಯ ಹುಟ್ಟಿದ ದಿನಾಂಕ ನನಗೆ ಗೊತ್ತಿರುವುದಿಲ್ಲ. ನನ್ನ ಮದುವೆಯಾದ ನಂತರ ಪ್ರತಿವಾದಿಯರು ನಮ್ಮ ಪಕ್ಕದ ಮನೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಪ್ರಸ್ತುತ ಕಾರವಾರದಲ್ಲಿಯೇ ವಾಸವಾಗಿರುತ್ತಾರೆ. ನನ್ನ ಮಾವ 1976 ನೇ ಸಾಲಿನಲ್ಲಿ ಖರೀದಿ ಮಾಡಿದ ಆಸ್ತಿಯು ಅವರ ಸ್ವಂತ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಗಂಡ ಮತ್ತು ನನ್ನ ಮಾವ ಇಬ್ಬರೂ ಸೇರಿ ತಮ್ಮ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ ಆಸ್ತಿ ಆಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಗಂಡನ ಆಧಾರ ಕಾರ್ಡ ಇರುವುದಿಲ್ಲ ಆದರೆ ಚುನಾವಣೆ ಗುರುತಿನ ಚೀಟಿ ಇರುತ್ತದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಿದ್ಧಳಿರುತ್ತೇನೆ. ನನ್ನ ಮಾವ 1976 ನೇ ಸಾಲಿನಲ್ಲಿ ಖರೀದಿ ಮಾಡಿದ ಜಮೀನಿನ ಖರೀದಿ ಪತ್ರವನ್ನು ನಾನು ಓದಿರುವುದಿಲ್ಲ. ಒಂದುವೇಳೆ ಸದರಿ ಖರೀದಿ ಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದರೇ ನಿಖರವಾಗಿ ವಿಷಯ ಕಂಡುಬರುತ್ತಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ಮಾವ ಮತ್ತು ನನ್ನ ಗಂಡ ಕೂಡಿ ತಮ್ಮ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ ಆಸ್ತಿ ಆಗಿರುತ್ತದೆ ಎಂದು ನಾನು ನನ್ನ ಬಾಯಿ ಮಾತಿನ ಮೂಲಕ ಹೇಳುತ್ತಿದ್ದೇನೆ ಎಂದರೆ ಸರಿ ಮತ್ತು ಆ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಪಹಣಿ ಪತ್ರ ಇರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಮಾವನ ಜೀವಿತಾವಧಿಯಲ್ಲಿ ಪಹಣಿ ಪತ್ರ ನನ್ನ ಗಂಡನ ಹೆಸರಿನಲ್ಲಿ ಇದ್ದಿರಲಿಲ್ಲ, ನನ್ನ ಮಾವ ಮೃತರಾದ ಬಳಿಕ ನನ್ನ ಗಂಡನ ಹೆಸರು ಪಹಣಿ ಪತ್ರದಲ್ಲಿ ನಮೂದಾಗಿರುತ್ತದೆ.



ನನಗೆ ವ್ಯವಹಾರಿಕ ಜ್ಞಾನ ಇರುತ್ತದೆ. ನಾನು ಉತ್ತರಕನ್ನಡ ಜಿಲ್ಲಾ ಫಿಶ್ ಫೆಡರೇಶನ್ ನ ನಿರ್ದೇಶಕಿ ಇರುತ್ತೇನೆ ಎಂದರೆ ಸರಿ. ನನ್ನ ಮಾವ ಅವರ ಜೀವಿತಾವಧಿಯಲ್ಲಿ ತನ್ನ ಇಬ್ಬರು ಹೆಣ್ಣು ಮಕ್ಕಳಾದ ಪ್ರತಿವಾದಿಯರ ಹೆಸರಿನಲ್ಲಿ ನೊಂದಾಯಿತ ಮೃತ್ಯುಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೊಂದಾಯಿತ ಮೃತ್ಯುಪತ್ರದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮದುವೆಯಾದ ನಂತರ ನನ್ನ ಅತ್ತೆ–ಮಾವನನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದುದರಿಂದ ಅವರು ತಮ್ಮ ಹೆಣ್ಣು ಮಕ್ಕಳಾದ ಪ್ರತಿವಾದಿಯರ ಜೊತೆ ಜೀವನ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯ ಸ್ವತಃ ನಾನೇ ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದೆ ಎಂದು ಸಾಕ್ಷ್ಯ

ನುಡಿಯುತ್ತಾರೆ. ನನ್ನ ಗಂಡ 1965 ನೇ ಸಾಲಿನಲ್ಲಿ ಜನಿಸಿರುತ್ತಾರೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ನನ್ನ ಗಂಡ ಕೇವಲ 10 ವರ್ಷ ವಯಸ್ಸಿನವರಿದ್ದರೂ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆದುದರಿಂದ ನನ್ನ ಗಂಡನಿಗೆ ಏನು ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನನ್ನ ಗಂಡ ಅವರ ತಂದೆಯ ಜೊತೆ ಮೀನುಗಾರಿಕಾ ವೃತ್ತಿಯನ್ನು ಮಾಡುತ್ತಿದ್ದು, ಉತ್ಪನ್ನ ಇತ್ತು ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಮಾವ ಸದರಿ ಆಸ್ತಿಯನ್ನು 1976 ನೇ ಸಾಲಿನಲ್ಲಿ ಖರೀದಿಸುವಾಗ ನನ್ನ ಗಂಡ ಸಹಾಯ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಗಂಡ 1976 ನೇ ಸಾಲಿನಲ್ಲಿ ಅಲ್ಪವಯಿ ಆಗಿದ್ದುದರಿಂದ ಆ ಸಮಯದಲ್ಲಿ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಕಾರವಾರದಲ್ಲಿ ಓರ್ವ ಸದಾನಂದ ಬಿಳೂರ್ ಕರ್ ಎಂಬ ದಸ್ತಾವೆಜು ಬರಹಗಾರರು ಇದ್ದರು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿಯವರೇ ಸದರಿ ಮೃತ್ಯು ಪತ್ರಕ್ಕೆ ದಸ್ತೂರ್ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೃತ್ಯು ಪತ್ರದ ಪ್ರಕಾರ ದಾವಾಸ್ತಿಯು ಪ್ರತಿವಾದಿಗಳಿಗೆ ಸೇರಿದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರದ ಬಗ್ಗೆ ನನ್ನ ಗಂಡನಿಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರದ ಬಗ್ಗೆ ನನಗೆ ಮತ್ತು ನನ್ನ ಗಂಡನಿಗೆ 2002 ನೇ ಇಸವಿಯಿಂದಲೇ ಮಾಹಿತಿ ಇದ್ದು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸದೇ ಇದ್ದುದರಿಂದ ಈ ದಾವೆಗೆ ಕಾಲಮತಿ ಬಾಧೆಯಿಂದ ವಜಾ ಮಾಡಲು ಯೋಗ್ಯ ಇರುತ್ತದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ನ್ಯಾಯಾವಾದಿರವರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**